**ದಿನಾಂಕಃ 13-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಎಫ್ ಎಸ್ ಪಿ ರವರಿಂದಃ-**

18. ನಿಪಿ-4 ರಲ್ಲಿ ಮೇಲೆ ಹೇಳಿರುವುದು ಎಲ್ಲಾ ನನ್ನ ಮಾಹಿತಿ ಪ್ರಕಾರ ಸರಿ ಇದೆ ಎಂದು ಬರೆದಿಲ್ಲ ಎಂದರೆ ಹೌದು. ಟ್ರ್ಯಾಪ್ ಕಾರ್ಯಾಚರಣೆಯ ಸಮಯದಲ್ಲಿ ಇದೇ ರೀತಿ ಆರೋಪಿಯ ಜೊತೆ ಸಂಭಾಷಣೆ ಮಾಡಬೇಕು ಎಂದು ನನಗೆ ಪೊಲೀಸನವರು ಹೇಳಿ ಕೊಟ್ಟಿರಲಿಲ್ಲ. ನಿಪಿ-23 ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಾಗಿರುವ ಸಂಭಾಷಣೆಯಲ್ಲಿ ನಾನು "ನೀವು ಅದರ ಬಗ್ಗೆ ಚಿಂತೆ ಬಿಟ್ ಬಿಡಿ ನಮ್ದು ಒಂದು ಇದೆ ಕೈ ಮುಗಿದು ಕೇಳುತ್ತೇನೆ ... ... .. ಅವನು ಅದರಲ್ಲಿ ಇದ್ದಾನೆ ಈಶ್ವರಯ್ಯ " ಎಂದು ನಾನು ಹೇಳಿದ್ದೇನೆ ಎಂದರೆ ಈಶ್ವರಯ್ಯನೇ ಸರ್ವೆ ಮಾಡದೇ ವಾಪಸ್ಸು ಬಂದಿದ್ದ ಆದ್ದರಿಂದ ಹೇಳಿದ್ದೇನೆ. ಸದರಿ ಈಶ್ವರಯ್ಯನಿಂದ ನನಗೆ ತೊಂದರೆ ಇತ್ತು ಎಂದರೆ ಹೌದು ಕಾರಣ ಅವರು ಸರ್ವೆ ಮಾಡದೇ ಇದ್ದ ಕಾರಣ ತೊಂದರೆ ಇತ್ತು. ಹೋಟೆಲ್ ನಲ್ಲಿ ರಾತ್ರಿ ಸುಮಾರು 8.30 ಗಂಟೆಯ ಸಮಯಕ್ಕೆ ಕಾರ್ಯಾಚರಣೆ ಮುಗಿಯಿತು. ಈಶ್ವರಯ್ಯ ನನ್ನ ಎದುರಾಳಿಯಾದ ದೇವಿದಾಸ್ ನಾಯಕ್ ನ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ಸಂಶಯ ಇತ್ತು ಎಂದರೆ ನನಗೆ ಎ ಡಿ ಎಲ್ ಆರ್ ರವರ ಮೇಲೆ, ಈಶ್ವರಯ್ಯರವರ ಮೇಲೆ ಮತ್ತು ಅವರ ಸಿಬ್ಬಂದಿ ಎಲ್ಲರ ಮೇಲೆ ಸರ್ವೆ ಕೆಲಸ ಮಾಡದೇ ಇದ್ದ ಬಗ್ಗೆ ಸಂಶಯ ಇತ್ತು. ನಿಪಿ-23 ರಲ್ಲಿ ಅದೇ ಸಂಭಾಷಣೆಯಲ್ಲಿ ನಾನು ಮುಂದುವರಿದು " ನನ್ನ ಹತ್ತಿರ ಏನೂ ಇಲ್ಲ, ನಾನು ಕಾರಿನಲ್ಲಿ ತಿರುಗ್ತಿದ್ದೆ ಹಾಗಿಲ್ಲ, ನಮ್ಮ ಹತ್ರ ಬಡವರು ಒಂದು ಜಮೀನಿನ ಬಗ್ಗೆ ಅದನ್ನು ಸರ್ವೆ ಮಾಡಿ ನಕಾಶೆ ಪೋಡಿ ಮಾಡಿಬಿಟ್ರೆ ನಂದು ಮುಗಿತು " ಎಂದು ಆರೋಪಿಗೆ ಹೇಳಿದ್ದೇನೆ ಎಂದರೆ ಆರೋಪಿ ರೂ.40000/- ರೊಕ್ಕ ಕೇಳಿದ್ದ ಕಾರಣ ನಾನು ಆ ರೀತಿ ಹೇಳಿದ್ದೇನೆ. ಆರೋಪಿ ನನ್ನಿಂದ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ನಾನು ನಶಾವಸ್ತೆಯಲ್ಲಿ ಪುಸಲಾಯಿಸಿ ಉದ್ರೇಕಿಸಿ ಆರೋಪಿಗೆ ಹಣವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಸಂಭಾಷಣೆಯಲ್ಲಿ " ಏನೂ ಗೊತ್ತಿಲ್ಲ, ಅವನು ತರ್ಲೇ ಇಲ್ಲ " ಎಂದು ಆರೋಪಿಗೆ ಹೇಳಿದ್ದೇನೆ ಎಂದರೆ ಹೌದು, ಅಂದರೆ ದೇವಿದಾಸ ನಾಯಕ್ ಏನೂ ತರಲಿಲ್ಲ ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂಬ ಬಗ್ಗೆ ಆ ರೀತಿ ಹೇಳಿದ್ದೇನೆ. ನಾನು ಮುಂದುವರಿದು " ಗಲಾಟೆ ಗೌಜಿ ಉಪಯೋಗಕ್ಕೆ ಬರುವುದಿಲ್ಲ ಅಲ್ಲ " ಎಂದು ಆರೋಪಿಗೆ ಹೇಳಿದ್ದೇನೆ ಎಂದರೆ ಸರ್ವೆ ಕಚೇರಿಯಲ್ಲಿ ನನಗೆ ಎ ಡಿ ಎಲ್ ಆರ್ ರವರು ಮತ್ತು ಅವರ ಸಿಬ್ಬಂದಿಯವರು ಬಹಳ ತೊಂದರೆ ಕೊಟ್ಟರು, ನಾನು ಕಾಗದ ಪತ್ರಗಳನ್ನು ಕೊಟ್ಟರೂ

ಅದನ್ನು ಅವರು ಸ್ವೀಕಾರ ಮಾಡಿದ್ದರೂ ಕೊಟ್ಟಿಲ್ಲ ಎಂದು ಹೇಳುತ್ತಿದ್ದರು, ಆ ಸಂಬಂಧದಲ್ಲಿ ನಾನು ಆ ರೀತಿ ಹೇಳಿದ್ದೇನೆ . ಸರ್ವೆ ಕಚೇರಿಯಲ್ಲಿ ನನಗೆ ಯಾರ ಬಗ್ಗೆಯೂ ಒಳ್ಳೆ ಅಭಿಪ್ರಾಯ ಇಲ್ಲ ಎಂದರೆ ಅವರು ಲಂಚ ತೆಗೆದುಕೊಳ್ಳುವವರು ಆಗಿದ್ದಾರೆ ನಾನು ಲಂಚ ಕೊಡಲು ತಯಾರು ಇರುವುದಿಲ್ಲ ಅಷ್ಟೆ . ನನ್ನ ಪೋಡಿ ಅರ್ಜಿ ತಿರಸ್ಕಾರ ಆಗುತ್ತದೆ ಎಂದು ನನಗೆ ಮೊದಲೇ ಗೊತ್ತಿದ್ದ ಕಾರಣ ನಾನು ಈ ಕೊಟ್ಟಿಪ್ರಕರಣ ಹೂಡಿದ್ದೇನೆ ಎಂದರೆ ಸರಿಯಲ್ಲ.

19. ನಾನು ದುಶ್ ಪ್ರೇರಣೆಯಿಂದ ಕಾನೂನನ್ನು ಮತ್ತು ಲೋಕಾಯುಕ್ತ ಪೊಲೀಸ ನವರನ್ನು ದುರ್ಬಳಕೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ನನಗೆ ಮೋಸ ಆಯಿತು ಎಂದು ನಾನು ಎಲ್ಲಿಯೂ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ಲಂಚ ಪ್ರತಿಬಂಧಕ ಅಧಿನಿಯಮದ ಕಲಂ 7 ಅನ್ವಯ ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಲಿಖಿತ ವಿವರಣೆಯಲ್ಲಿ ರೂ.15000/- ಪಡೆದಿರುವುದು ವಯಕ್ತಿಕ ವ್ಯವಹಾರ ಆಗಿದೆ ಮತ್ತು ನನ್ನ ಪೋಡಿ ಅರ್ಜಿಗೆ ಸಂಬಂಧಪಟ್ಟಿಲ್ಲ ಎಂದು ಹೇಳಿದ್ದಾನೆ ಎಂದರೆ ಪೋಡಿ ಸಲುವಾಗಿಯೇ ಲಂಚ ಕೇಳಿ ರೂ.15000/- ಅನ್ನು ಆರೋಪಿ ಪಡೆದುಕೊಂಡಿದ್ದಾನೆ. ರೂ.15000/- ಅನ್ನು ಆರೋಪಿ ಪಡೆದಿಲ್ಲ ಮತ್ತು ಲಿಖಿತ ಸಮಜಾಯಿಸಿಯಲ್ಲಿ ಮಾತ್ರ ಆ ರೀತಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ